ಬಂದ ಶುಭಾ, 'ಈಶ್ವರಮಾವ... ಹಾಗೆಲ್ಲ ಒಬ್ನೆ ಹೊರಗೆ ಬರಬಾರ್ದು. ಒಳಗೆ ಬಾ' ಅಂತ ಭುಜ ಬಳಸಿ ಎಳೆದರೂ ಹಟ ಮಾಡುತ್ತಿರುವವನನ್ನು ಆ ಹುಡುಗಿಯೂ ಕೈಜೋಡಿಸಿ ಒಳಗೆ ತಂದು ಕೂಡಿಸಿದರು. 'ಹೌದು ಇಷ್ಟೆಲ್ಲ ಸಲುಗೀಲಿ ಮಾತಾಡವ್ರು ನೀ ಯಾರು?' ಕೇಳಿದ.

'ಯಾಕೆ ಮಾವ... ನಾನು ಶುಭಾ, ನಿನ್ನ ತಮ್ಮನ ಸೊಸೆ. ಇದು ನಮ್ಮನೆ ಅಂದ್ರೆ ನಿಮ್ಮನೀನೆ.'

'ಅಂದ್ರೆ ಕೇಶವನೊ ಚಂದ್ರುನೋ...'

'ಕೇಶವ ಮಾವನ ಹಿರೇಮಗ ಗಣೇಶನ ಹೆಂಡತಿ ನಾನು.'

ತನ್ನ ತಮ್ಮನ ಮಗನ ಮನೆಯಲ್ಲಿ ತಾನಿದ್ದೇನೆ ಅನ್ನುವಷ್ಟು ಗೊತ್ತಾದರೂ ಅರ್ಥವಾಗದ್ದು ಅಗಾಧವಾಗಿ ಅಚ್ಚರಿಯ ಕೂಪವಾಗಿತ್ತು. 'ನನ್ನ ರೂಪ ಶರೀರ ಎಲ್ಲಾ ಹಿಂಗ್ಯಾಕಾಗದೆ... ವತ್ಸಲಾ ಯಾಕೆ ಎದುರು ಮನೇಲಿರೂದು.. ಅದು ಹೋಗ್ಲಿ ಮಾವಿನಕುರ್ವೆಯಿಂದ ನಾನು ಇಲ್ಲಿಗ್ಯಾಕೆ ಬಂದೆ... ಈಗ ಅಲ್ಲಿರೂದು ಯಾರು?'

ಶುಭಾ ಅವನನ್ನು ಅಚ್ಚರಿಭರಿತ ಸಂದೇಹದಲ್ಲಿ ನೋಡಿದಳು. 'ಈಗ ಯಾವ ಪ್ರಶ್ನೆನೂ ಬ್ಯಾಡ. ಆರಾಮು ಮಾಡು. ಸಂಜಿಗೆ ಇವರು ಬಂದ್‌ಮೇಲೆ ಎಲ್ಲಾ ಕೇಳ್ವ, ಆಯ್ತಾ...' ಅಂತ ಸಮಾಧಾನಿಸಿ ಮೆತ್ತಗೆ ಹೊರಬಾಗಿಲಿಗೆ ಕೀಲಿ ಹಾಕಿ ಬಂದಳು.

ಅವನು ಹಾಲಿನಲ್ಲಿ ದೀವಾನಮೇಲೆ ಅಡ್ಡಾಗಿದ್ದು ನೋಡಿ ಮಲಗುವ ಕೋಣೆಗೆ ಹೋದವಳು ಮೊಬೈಲು ತೆಗೆದುಕೊಂಡಳು. 'ನೀವು ನಂಗೆ ಯಾವ್ದೂ ಸರಿ ಹೇಳೂದಿಲ್ಲ, ಹೀಗಾಗಿ, ಇದು ಖುಷೀದೋ ಬೇಸರದ್ದೋ ಗೊತ್ತಿಲ್ಲ, ಈಶ್ವರಮಾವಗೆ ಹಳೇದೆಲ್ಲಾ ನೆನಪು ಮತ್ತೆ ಬಂದಾಂಗೆ ಕಾಣತದೆ. ಅವ ಎಲ್ಲಾ ರೀತೀಲು ಸರಿಯಾಗಾನೆ ಈಗ. ಆರಿದ್ರಮಳೆ ಸುರದಾಂಗೆ ಪ್ರಶ್ನೆ ಸುರುಸೂಕೆ ಸುರುಮಾಡಿ ನನ್ನ ತಲೆ ಕೆಟ್ಟೇ ಹೋಗದೆ. ಈಗ ಮನಿಗೆ ಬರ್ರಾ ಏನು ಮಾಡತ್ರಿ ನೋಡಿ...'

ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿ ಕುಳಿತ ಗಣೇಶನಿಗೆ ನಂಬಲಾಗಲಿಲ್ಲ. ಇದು ಸತ್ಯವಾಗಿದ್ದಲ್ಲಿ ಅದರ ಮುಂದಿನ ಬೆಳವಣಿಗೆಗಳು ಅದರಿಂದ ಆಗಬಹುದಾದ ಅನೇಕ ಸಾಧ್ಯತೆಗಳು ಆತಂಕಕಾರಿಯೆನಿಸತೊಡಗಿ ಚಡಪಡಿಕೆ ತೀವ್ರವಾಗಿ ಹುಣಸೂರಿಗೆ ಕೆಲಸದಮೇಲೆ ಹೋಗಿರುವ ಅಪ್ಪನಿಗೆ ಫೋನು ಮಾಡಿ ಅರ್ಧದಿನ ರಜೆಹಾಕಿ ಮನೆಗೆ ಹೊರಟ. ಇವನಿಗಿಂತ ಹೆಚ್ಚು ವಿಚಲಿತನಾದ ಕೇಶವ ತಕ್ಷಣ ಬೆಂಗಳೂರಿನತ್ತ ಧಾವಿಸಿದ.

***

'ಆವತ್ತೆ ಅವನ್ನ ಮುಗ್ಸಿ ಅಳಿವೆ ಬಾಯಿಗೆ ಬಿಸಾಕಿದ್ರೆ ಇವತ್ತು ಈ ಪ್ರಸಂಗ ಬರ್ತಿರಲಿಲ್ಲ.'

'ಈಶ್ವರಮಾವ ಅಂತದ್ದೇನು ಮಾಡಿದ್ದು?' ಬಾಯಿಮೇಲೆ ಕೈಯಿಟ್ಟುಕೊಂಡು ಗಾಬರಿಯ ಮುದ್ದೆಯಾದ ಶುಭಾಳನ್ನು ಆಗಷ್ಟೆ ಗಮನಿಸಿ ಕೊಲೆಪಾತಕ ಮನಸನ್ನು ಬಹಿರಂಗಪಡಿಸಿದ ಆತಂಕದಲ್ಲಿ ಕೇಶವ ಮಾತು ತಡೆದ. ದೊಡ್ಡಪ್ಪನ ಮೇಲೆ ಕಣ್ಣಿಟ್ಟಿರಲು ಒಪ್ಪಿಸಿ ತಾಯಿಯನ್ನು ಹಾಲಿನಲ್ಲಿ ಬಿಟ್ಟಿದ್ದ ಗಣೇಶ. ಆದರೆ, ಹಾಲು ಕೊಡಲು ಬಂದ ಶುಭಾ ಉಪಾಯದಿಂದ ಕೋಣೆಯಲ್ಲೆ ಉಳಿದಿದ್ದು ಲಕ್ಷ್ಯಕ್ಕೆ ಬಂದು, 'ನಾಳಿನ ಕೆಲ್ಸ ಬಿಟ್ಕಂಡಿ ನೀ ಇಲ್ಲೆಂತದು ಮಾಡೂದು?' ಗದರಿಕೊಂಡ. 'ನಾ ಈಗ ಎಂತಾ ತೊಂದ್ರೆ ಕೊಟ್ಟಿದ್ದು... ಕೆಲ್ಸ ಎಲ್ಲ ಮುಗ್ಸಿ ಆಗದೆ' ಅಂದವಳು ಹೊರಗೆ ಹೋಗಲಿಲ್ಲ.

ಕರಕರೆಯಲ್ಲಿ ಅಂತಹದೊಂದು ಮಾತಾಡಿದ್ದರೂ ತನಗೆ ಆ ಯೋಚನೆ ಆವತ್ತು ಸುಳಿಯದೆ ಹೋಗಿರಲಿಲ್ಲ ಅನ್ನುವುದು ಕೇಶವನ ಅಂತರ್ಯದಲ್ಲಿ ಚುಚ್ಚಿತು. ಮರೆವಿನ ಕಾಯಿಲೆ ಅಲ್ಜೈಮರ್ ಅಂತ ವಯಸ್ಸಾದವರಲ್ಲಿ ಬರುವುದಿದೆ, ಆದರೆ ಅದಲ್ಲ ಇದು. ಒಮ್ಮೊಮ್ಮೆ ಯಾವುದೋ ಆಘಾತಕ್ಕೆ ಸಣ್ಣ ಪ್ರಾಯದವರಲ್ಲೂ ಅಪರೂಪಕ್ಕೆ ನೆನಪು ನಾಶವಾಗಿ ಹೋಗುವುದಿದೆ ಅಂದಿದ್ದರು ಹೊನ್ನಾವರದ ಡಾಕ್ಟರು. ಇಡಗುಂಜಿಯಲ್ಲಿ ಆವತ್ತು ತೇರು. ಅಂಗಡಿಗಳ ಸಾಲಲ್ಲಿ ತಮ್ಮ ಬೀಗದ ಅಂಗಡಿಯನ್ನೂ ಪ್ರತಿವರ್ಷದಂತೆ ಹಾಕಿದ್ದರು. ಮದುವೆಯಾದ ಹೊಸತು. ತನ್ನನ್ನು ಅಂಗಡಿಯಲ್ಲಿ ಸ್ವಲ್ಪ ಕೂತಿರಲು ಹೇಳಿ ಹೆಂಡತಿ ಜೊತೆ ಜಾತ್ರೆಯಲ್ಲಿ ತಿರುಗಾಡಲು ಹೋದ. ಅತ್ತಿಗೆ ಹೇಳುವ ಪ್ರಕಾರ ದೇವರ ದರ್ಶನಮಾಡಿ ಮಳಿಗೆಗಳನ್ನೆಲ್ಲ ಸುತ್ತಿ, ಶರಬತ್ತು ಕುಡಿಸಿ ಜೋರು